**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5007/2023 & 5048/2024.**

**ಸಿ.ಡಬ್ಲ್ಯೂಃ-2 ಪಿ.ಡಬ್ಲ್ಯೂಃ-2**

**ದಿಃ 29.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಯಶವಂತ ಮಾರುತಿ ಬಾಗಡಿ |
| ವಯಸ್ಸು | : | 59 ವರ್ಷ. |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮೋದಗಾ |

ಸಾಕ್ಷಿಗೆ ಕನ್ನಡ ಭಾಷ್ಷೆ ಬರುವುದಿಲ್ಲದ ಕಾರಣ ಮರಾಠಿ ಭಾಷೆಯಿಂದ ಕನ್ನಡ ಭಾಷೆಗೆ ಅನುವಾದ ಮಾಡಲು ಶ್ರೀ ಎ.ಸಿ.ಕಮತೆ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಕ ಮಾಡಿ ಸಾಕ್ಷಿ ಹೇಳಿಕೆಯನ್ನು ದಾಖಲು ಮಾಡಲಾಯಿತು.

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

1) ಚಾ.ಸಾ.1 ಮತ್ತು 3 ರವರು ನನಗೆ ಗೊತ್ತು. ಮೃತ ಮಹಾದೇವ ನನಗೆ ಗೊತ್ತು. ಸುಮಾರು 4 ವರ್ಷಗಳ ಹಿಂದೆ ಪೋಲಿಸರು ಮೃತ ಮಹಾದೇವನ ಮನೆ ಬಳಿ ನಾನು ಮೃತನನ್ನು ನೋಡಲು ಹೋಗಿದ್ದಾಗ ಮೃತ ದೇಹವನ್ನು ಆತನ ಮನೆಯಲ್ಲಿ ನೇಣುಹಗ್ಗದಿಂದ ಬಿಡಿಸಿ ಕೆಳಗೆ ಇಳಿಸಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದಾರೆ. ಪಂಚನಾಮೆಯಲ್ಲಿರುವ

ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಂತರ ಮೃತದೇಹವನ್ನು ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುತ್ತಾರೆ. ಮೃತದೇಹದ ಮೇಲೆ ಯಾವುದೇ ಗಾಯದ ಗುರುತುಗಳಿರಲಿಲ್ಲ. ಸ್ಥಳದಲ್ಲಿ ಪೋಲಿಸರು ಮು.ಮಾ.1 ರ ಹಗ್ಗವನ್ನು ಜಪ್ತಿಪಡಿಸಿರುತ್ತಾರೆ. ಆ ಕಾಲಕ್ಕೆ ನಿ.ಪಿ.3 ರಿಂದ 5 ರ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಅದೇ ದಿನ ಮೃತನ ಶವ ಪಂಚನಾಮೆಯನ್ನು ಪೋಲಿಸರು ನನ್ನ ಸಮಕ್ಷಮ ಮಾಡಿ ಪಂಚನಾಮೆಗೆ ನನ್ನ ಸಹಿ ಪಡೆದಿದ್ದಾರೆ. ಶವ ಪಂಚನಾಮೆಯನ್ನು ನಿ.ಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಆರೋಪಿತರ ಪರ:- ಶ್ರೀ ವೈ.ಎಸ್.ಜಿ ವಕೀಲರಿಂದಃ-**

1) ನನಗೆ ಕನ್ನಡ ಭಾಷ್ಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ. ನಿ.ಪಿ.2 ಮತ್ತು 7 ರ ಪಂಚನಾಮೆಗಳಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿ. ಸ್ಥಳದಲ್ಲಿ ನಾನು ಇದ್ದಾಗ ಪೋಲಿಸರು ಛಾಯಾಚಿತ್ರ ತೆಗೆದಿದ್ದಾರೆ, ಯಾವ ಕಾರಣಕ್ಕೆಂದು ಹೇಳಲಿಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾ.ಓ.ಹೆ.ಕೆ.ಸ.ಅ.)

(ವಿಜಯ ಕುಮಾರ)
7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕೋಡಿ.

**ಭಾಷಾಂತರಕಾರರ ಸಹಿ**